# ಅರವಿಂದ್ ಪ್ರಯೋಗಶಾಸ್ತ್ರ!

**ಮೊದಲ ಸಿನಿಮಾದಲ್ಲಿಯೇ ತಾನು ಸಿನಿಮಾ ಮಾಧ್ಯಮದ ಗಂಭೀರ ವಿದ್ಯಾರ್ಥಿ ಎಂಬುದನ್ನು ಸಾಬೀತುಗೊಳಿಸಿರುವ ಅರವಿಂದ ಶಾಸ್ತ್ರಿ, ಹೊಸ ಹೊಸ ಕನಸುಗಳನ್ನು ಕಟ್ಟಿಕೊಂಡು ನಡೆಯುತ್ತಲೇ ಇದ್ದಾರೆ. ಕ್ಲಿಷ್ಟಕರವಾದ ದಾರಿಯಲ್ಲಿ ಎದುರಾಗುವ ಎಲ್ಲ ಸವಾಲುಗಳೂ ತಮ್ಮ ಸತ್ವಪರೀಕ್ಷೆಯ ಸನ್ನಿವೇಶಗಳು ಎಂದೇ ಅವರು ಪರಿಗಣಿಸುತ್ತಾರೆ.**

■ ಪದ್ಮನಾಭ ಭಟ್



**2015**ರಲ್ಲಿ ಬಿಡುಗಡೆಯಾದ 'ಕಹಿ', ಸಿನಿಮಾ ಕನ್ನಡ ಸಿನಿಮಾಲೋಕದಲ್ಲಿ ಮಹಾನಗರದ ಆಧುನಿಕ ಬದುಕಿನ ವಿವಿಧ ಆಯಾಮಗಳನ್ನು ಸೆರೆಹಿಡಿಯುವ ವಿಶಿಷ್ಟ ಪ್ರಯತ್ನವಾಗಿತ್ತು. ಈ ಚಿತ್ರವನ್ನು ನಿರ್ದೇಶಿಸಿದ್ದು ಅರವಿಂದ ಶಾಸ್ತ್ರಿ. 'ಕಹಿ' ಚಿತ್ರದ ನಂತರದ ದಿನಗಳು ಅವರ ಪಾಲಿಗೆ ಸಿಹಿಯೇನೂ ಆಗಿರಲಿಲ್ಲ. ಆದರೆ 'ಕನಸಿನ ದಾರಿಯಲ್ಲಿ ಎದುರಾಗುವ ಎಲ್ಲ ಅನುಭವಗಳೂ ನಮ್ಮನ್ನು ಇನ್ನಷ್ಟು ಮಾಗಿಸುತ್ತವೆ. ಅವೆಲ್ಲವೂ ನನ್ನ ಪಾಲಿಗೆ ಒಂದೊಂದು ಪಾಠಗಳು' ಎಂದೇ ನಂಬಿಕೊಂಡಿರುವ ಅರವಿಂದ್ ನಿರಂತರವಾಗಿ ಹೊಸ ಹೊಸ ಪ್ರಯೋಗಗಳಿಗೆ, ಪ್ರಯತ್ನಗಳಿಗೆ ತಮ್ಮನ್ನು ಒಡ್ಡಿಕೊಳ್ಳುತ್ತಲೇ ಇದ್ದಾರೆ.

ಕಹಿ ನಂತರ ಅವರು 'ಅಳಿದುಳಿದವರು' ಎಂಬ ಮಿಸ್ಟರಿ ಥ್ರಿಲ್ಲರ್ ಸಿನಿಮಾ ನಿರ್ದೇಶನ ಮಾಡಿದ್ದರು. ಅಶು ಬೇದ್ರೆ ನಿರ್ಮಾಣ ಮಾಡಿ, ನಾಯಕನಾಗಿ ನಟಿಸಿರುವ ಈ ಚಿತ್ರ ಎರಡು ವರ್ಷಗಳ ಹಿಂದೆಯೇ ಶುರುವಾಗಿತ್ತು. ಬಹಳ ಹಿಂದೆಯೇ ಪೂರ್ಣಗೊಂಡಿರುವ ಈ ಚಿತ್ರ ಪ್ರಮಾಣೀಕರಣ ಮಂಡಳಿಯ ಅಂಗಳದಲ್ಲಿದೆ. 'ಅಳಿದುಳಿದವರು' ಸಿನಿಮಾಗೆ ಯಾಕಷ್ಟು ಸಮಯ ತಗುಲುತ್ತಿದೆ ಎಂದು ಕೇಳಿದರೆ 'ನನ್ನ ಕೆಲಸವನ್ನು ನಾನು ಮಾಡಿಕೊಟ್ಟಿದ್ದೇನೆ' ಎಂದು ನಗುತ್ತಾರೆ. ಜುಲೈನಲ್ಲಿ ಸಿನಿಮಾ ಬಿಡುಗಡೆಯಾಗುವ ಸೂಚನೆಯನ್ನೂ ನೀಡುತ್ತಾರೆ.

ಇದರ ನಡುವೆಯೇ 'ಬಾಯಿಲ್ಡ್ ಬೀನ್ಸ್' ಎಂಬ ನಿರ್ಮಾಣ ಸಂಸ್ಥೆಯನ್ನು ಕಟ್ಟಿಕೊಂಡಿರುವ ಅರವಿಂದ್ ಒಂದಿಷ್ಟು ಆಸಕ್ತರ ತಂಡ ಕಟ್ಟಿಕೊಂಡು ಹಲವು ಪ್ರಯೋಗಗಳಲ್ಲಿ ತೊಡಗಿಕೊಂಡಿದ್ದಾರೆ. ಈಗಾಗಲೇ ಕಿರುತೆರೆಗೆ 'ಶಾಂತಂ ಪಾಪಂ' ಎಂಬ ಒಂದು ಧಾರಾವಾಹಿಯನ್ನು ನಿರ್ಮಾಣ ಮಾಡಿದ್ದಾರೆ. ಸದ್ಯವೇ ಕಲರ್ಸ್ ವಾಹಿನಿಯಲ್ಲಿ ಆರಂಭವಾಗಲಿರುವ ಇನ್ನೊಂದು ಧಾರಾವಾಹಿಯ ಸಿದ್ಧತೆಯನ್ನೂ ನಡೆಸುತ್ತಿದ್ದಾರೆ.

ಇದರ ಜತೆಯಲ್ಲಿಯೇ ಅರವಿಂದ್ ಮತ್ತೊಂದು ಸಿನಿಮಾ ನಿರ್ದೇಶನದ ತಯಾರಿಯನ್ನೂ ನಡೆಸುತ್ತಿದ್ದಾರೆ. ಜೂನ್ ಅಂತ್ಯ ಅಥವಾ ಜುಲೈ ಮೊದಲ ವಾರದಲ್ಲಿ ಈ ಚಿತ್ರದ ಚಿತ್ರೀಕರಣ ಪ್ರಾರಂಭವಾಗುತ್ತದಂತೆ. 'ಇದೊಂದು ಬಗೆಯ ಕ್ರೈಂ ಥ್ರಿಲ್ಲರ್ ಎನ್ನಬಹುದೇನೋ. ಈ ಕಥೆ ಯಾವ ಜಾನರ್‌ಗೆ ಸೇರಿಸಬೇಕು ಎಂಬುದು ನನಗೂ ಗೊತ್ತಿಲ್ಲ. ತೀರಾ ಹೊಸ ಬಗೆಯದು ಎಂದೂ ಹೇಳುವುದಿಲ್ಲ. ಒಂದು ಬಗೆಯ ಹುಡುಕಾಟದಲ್ಲಿದ್ದೇನೆ. ಏನಾಗುತ್ತದೆಯೋ ನೋಡಬೇಕು' ಎನ್ನುತ್ತಾರೆ ಅರವಿಂದ್. ಸದ್ಯಕ್ಕೆ ಚಿತ್ರಕಥೆಯನ್ನು ತಿದ್ದುವುದರಲ್ಲಿ ಅವರು ಮಗ್ನರಾಗಿದ್ದಾರೆ. ಮಾಂಡ್ರೆ ನಿರ್ಮಾಣ ಸಂಸ್ಥೆ, ಈ ಸಿನಿಮಾ ನಿರ್ಮಿಸುತ್ತಿರುವುದು ವಿಶೇಷ. ಶರ್ಮಿಳಾ ಮಾಂಡ್ರೆ ಮತ್ತು ನೀನಾಸಂ ಸತೀಶ್ ಮುಖ್ಯಭೂಮಿಕೆಯಲ್ಲಿ ನಟಿಸಬೇಕು ಎನ್ನುವುದು ಅರವಿಂದ್ ಆಸೆ. 'ಶರ್ಮಿಳಾ ಮತ್ತು ಸತೀಶ್ ಒಂದೇ ವರ್ಷ ಚಿತ್ರರಂಗಕ್ಕೆ ಬಂದವರು. ಈ ಸಿನಿಮಾದಲ್ಲಿ ನಟಿಸಿದರೆ ಮೊದಲ ಬಾರಿಗೆ ಒಟ್ಟಿಗೆ ತೆರೆಯನ್ನು ಹಂಚಿಕೊಂಡ ಹಾಗಾಗುತ್ತದೆ. ಆದರೆ ಯಾವುದೂ ಇನ್ನೂ ಅಂತಿಮಗೊಂಡಿಲ್ಲ' ಎಂದು ಅವರು ಹೇಳುತ್ತಾರೆ.

'ಬಾಯಿಲ್ಡ್ ಬೀನ್ಸ್' ಚಿತ್ರಸಂಸ್ಥೆಯ ಅಡಿಯಲ್ಲಿ ಸಿನಿಮಾ ನಿರ್ಮಾಣ ಮಾಡುವ ಕನಸೂ ಅವರಿಗಿದೆ. 'ಏನೇನೋ ಮಾಡಬೇಕು ಎಂದು ಕನಸಿಟ್ಟುಕೊಂಡಿದ್ದೇವೆ. ಪ್ರತಿಭಾವಂತರ ತಂಡವೂ ಇದೆ. ನಮ್ಮ ಕೆಲಸದಿಂದ ಚಿತ್ರರಂಗಕ್ಕೆ ಒಳ್ಳೆಯದಾಗಬಹುದು ಎಂಬ ನಂಬಿಕೆ ಇದೆ. ಹಾಗಂತ ಚಿತ್ರರಂಗವನ್ನು ಉದ್ಧಾರ ಮಾಡಲು ಹೊರಟಿಲ್ಲ. ನಮ್ಮ ಸ್ವಾರ್ಥವೂ ಇದೆ. ನಾವು ಮಾಡುವ ಕೆಲಸ ಚೆನ್ನಾಗಿದ್ದರೆ, ಅದು ಚಿತ್ರರಂಗದಲ್ಲಿಯೂ ಒಳ್ಳೆಯ ಪರಿಣಾಮವನ್ನೇ ಉಂಟು ಮಾಡುತ್ತದೆ ಎಂಬುದು ನಮ್ಮ ನಂಬಿಕೆ' ಎನ್ನುತ್ತಾರೆ.

ತಮ್ಮ ಕಚೇರಿಯನ್ನು ಚಿತ್ರರಂಗದ ಬರಹಗಾರರು, ನಟರು, ತಂತ್ರಜ್ಞರ 'ಜಾಗೃತ ವಲಯ'ವನ್ನಾಗಿ ರೂಪಿಸಬೇಕು ಎಂಬುದು ಅವರ ಇರಾದೆ. ಇದಕ್ಕೆ ಅನುಗುಣವಾಗಿ ಪ್ರತಿದಿನವೂ ಹೊಸಹೊಸ ಕಲಾವಿದರು, ಬರಹಗಾರರನ್ನು ಭೇಟಿಯಾಗುತ್ತಲೇ ಇರುತ್ತಾರೆ. ಅವರ ಕುರಿತ ಮಾಹಿತಿಯನ್ನು ಸುಸಜ್ಜಿತವಾಗಿ ಕಾಪಿಡುವ ಕೆಲಸವನ್ನೂ ಮಾಡುತ್ತಿದ್ದಾರೆ.

ಚಿತ್ರ: ಆನಂದ ಬಕ್ಷಿ

ಪ್ರತಿಕ್ರಿಯಿಸಿ: ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ.
ಇ–ಮೇಲ್: feedback@sudha.co.in